ಕರ್ನಾಟಕ ಸರ್ಕಾರ

ಸಂ:ಸಾರಿಇ 9 ಟಿಡಿಆರ್ 2020 (ಪಿ-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 06-07-2020

## ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ ಟಿಡಿ 9 ಟಿಡಿಆರ್ 2020 ದಿನಾಂಕ: 03-04-2020ರನ್ವಯ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ1957ರ ಕಲಂ 4(1)ರ ನಿಯಮಗಳನ್ನು ಸಡಿಲಗೊಳಿಸಿ, ಕರ್ನಾಟಕ ರಾಜ್ಯದ ಎಲ್ಲಾ ನೋಂದಾಯಿತ ವಾಹನಗಳಿಗೆ (ಹೊಸ ವಾಹನಗಳ ನೋಂದಣಿಯನ್ನು ಹೊರತುಪಡಿಸಿ) ಅನ್ವಯಿಸುವಂತೆ ದಿನಾಂಕ: 15-04-2020 ಮತ್ತು 15-05-2020ರ ಒಳಗಾಗಿ ಪಾವತಿಸಬೇಕಾಗಿದ್ದ ಮೋಟಾರು ವಾಹನ ತೆರಿಗೆಯನ್ನು ದಂಡ ರಹಿತವಾಗಿ ಪಾವತಿಸಲು ಈಗಾಗಲೇ ದಿನಾಂಕ: 01-06-2020ರವೆಗೆ ವಿಸ್ತರಿಸಿರುವ ಅವಧಿಯನ್ನು ಮತ್ತು ದಿನಾಂಕ: 15-06-2020ರ ಒಳಗಾಗಿ ಪಾವತಿಸಬೇಕಾಗಿದ್ದ ಮೋಟಾರು ವಾಹನ ತೆರಿಗೆಯನ್ನು ಕರ್ನಾಟಕ ರಾಜ್ಯದ ಎಲ್ಲಾ ನೋಂದಾಯಿತ ವಾಹನಗಳಿಗೆ (ಹೊಸ ವಾಹನಗಳ ನೋಂದಣಿಯನ್ನು ಹೊರತುಪಡಿಸಿ) ಅನ್ವಯಿಸುವಂತೆ ದಂಡ ರಹಿತವಾಗಿ ಪಾವತಿಸಲು ದಿನಾಂಕ: 15-07-2020ರ ವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗರಾಜ)
ಸರ್ಕಾರದ ಉಪ ಕಾರ್ಯದರ್ಶಿ,
ಸಾರಿಗೆ ಇಲಾಖೆ.

**ಇವರಿಗೆ:**

1) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಕೆಂಗೇರಿ, ಬಂಗಳೂರು.
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3) ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಶಾಂತಿನಗರ, ಬೆಂಗಳೂರು.
4) ಸಾರಿಗೆ ಇಲಾಖೆಯ ಎಲ್ಲಾ ಅಪರ/ಜಂಟಿ/ಉಪ ಆಯುಕ್ತ ಮತ್ತು ಹಿ.ಪ್ರಾ.ಸಾ.ಅ/ಎಲ್ಲಾ ಪ್ರಾ.ಸಾ.ಅ/ಸ.ಪ್ರಾ.ಸಾ.ಅ ಗಳಿಗೆ (ಸಾರಿಗೆ ಆಯುಕ್ತೆ ಮುಖಾಂತರ).

**ಪ್ರತಿಗಳು:**

1) ಮಾನ್ಯ ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
2) ಪ್ರಧಾನ ಕಾರ್ಯದರ್ಶಿಗಳು., ಸಾರಿಗೆ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
3) ಉಪಕಾರ್ಯದರ್ಶಿ ಸಾರಿಗೆ ಇಲಾಖೆ ರವರ ಆಪ್ತ ಸಹಾಯಕರು.
4) ಹೆಚ್ಚುವರಿ ಪ್ರತಿಗಹಳು/ಶಾಖಾ ರಕ್ಷಾ ಕಡತ.

Scanned by CamScanner